**OS- 400/2022** **PW-1**

<u>ದಿಃ04.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲುಃ 2 ಮತ್ತು 3 ನೇ ಪ್ರತಿವಾದಿ ಪರ ಶ್ರೀ ಎ.ಆರ್ .ಎ ವಕೀಲರಿಂದಃ</u>**

ನನ್ನ ತಂದೆ ದಿಃ18-03-1989 ರಂದು ಹೃದಯಘಾತದಿಂದ ಮರಣ ಹೊಂದಿದರು ಎಂದರೆ ಸರಿ. ನನ್ನ ತಂದೆಯವರಿಗೆ ಇದ್ದ ಹೃದಯದ ಖಾಯಿಲೆ ಬಗ್ಗೆ ಮೊದಲಿನಿಂದಲೂ ಅವರಿಗೆ ಗೊತ್ತಿತ್ತು ಎಂದರೆ ಸರಿ. ಹೃದಯದ ಖಾಯಿಲೆ ಬಿಟ್ಟು ಅವರು ಮಾನಸಿಕವಾಗಿ ಗಟ್ಟಿಮುಟ್ಟಾಗಿದ್ದರು ಎಂದರೆ ಸರಿ. ಹೃದಯದ ಖಾಯಿಲೆ ಬಗ್ಗೆ ಗೊತ್ತಿದ್ದ ಕಾರಣ ಅವರು ತಮ್ಮ ಪರವಾರದ ಬಗ್ಗೆ ಮೊದಲಿನಿಂದಲೂ ಕಾಳಜಿ ವಹಿಸಿ ಯಾರು ಯಾರಿಗೆ ಎನೇನೂ ಮಾಡಬೇಕೆಂದು ವಿಚಾರ ಮಾಡಿಕೊಂಡಿದ್ದರು ಎಂದರೆ ಸಾಕ್ಷಿ ನಾನು ಆಗ ಸಣ್ಣವಳಿದ್ದೆ ಆ ಕಾರಣ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಖಾಯಿಲೆ ಇದ್ದುದರಿಂದ ನನ್ನ ತಂದೆ ಮನೆಯರಿಗೆ ಯಾರು-ಯಾರಿಗೆ ಎನೇನೂ ಮಾಡಬೇಕೆಂದು ವಿಚಾರ ಮಾಡಿದ್ದರು ಎಂದರೆ ಸಾಕ್ಷಿ ಹೌದು ಮಾಡಿದ್ದರು ಎನ್ನುತ್ತಾರೆ. ಆ ಸಮಯದಲ್ಲಿ ಅವರು ಎನೇನೂ ಕೆಲಸಗಳನ್ನು ಮಾಡುತ್ತಿದ್ದರು ಅದು ಮನೆಯವರಿಗೆ ಸರಿ ಆಗಲಿ ಎಂದು ಮಾಡುತ್ತಿದ್ದರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನನ್ನ ತಂದೆ ದಿಃ28-11-1988 ರಂದು ನನ್ನ ತಾಯಿಯವರ ಸಮಕ್ಷಮ ಒಂದು ಮೃತ ಪತ್ರ ಬರೆದಿಟ್ಟಿದ್ದರು ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನು ಆ ಸಮಯದಲ್ಲಿ ಸಣ್ಣವಳಿದ್ದ ಕಾರಣ ನನಗೆ ಇದರ ಬಗ್ಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಎಲ್ಲ ಮಾಹಿತಿ ಇದೆ ಎನ್ನುತ್ತಾರೆ. ಸದರಿ ಮೃತ್ಯು ಪತ್ರದ ಬಗ್ಗೆ ವಾದಿ ನಂಬರ 1 ಹಾಗೂ ನನ್ನ ತಾಯಿ ಮತ್ತು ಎಲ್ಲರಿಗೂ ಮಾಹಿತಿ ಇದೆ ಎಂದರೆ ಸಾಕ್ಷಿ ನನ್ನ ತಂದೆ ಮೃತ್ಯು ಪತ್ರ ಮಾಡಿಲ್ಲ ಎನ್ನುತ್ತಾರೆ. ಸದರಿ ಮೃತ್ಯು ಪತ್ರ ನನ್ನ ತಾಯಿ ಕಡೆ ಇದೆ ಎಂದರೆ ಸಾಕ್ಷಿ ಇಲ್ಲ ಅದು ಮಾಡಿಯೆ ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಾವು ಹಾಜರುಪಡಿಸಿರುವ ಕಾಗದ ಪತ್ರಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿ. ನಿಶಾನೆ ಪಿ 5 ನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ನನ್ನ ತಾಯಿ ಹಾಗೂ ಇಬ್ಬರು ಅಣ್ಣಂದಿರ ಹೆಸರು ಇದೆ ಎಂದರೆ ಸಾಕ್ಷಿ ಅವರ ಹೆಸರು ಇದೆ ನನ್ನ ಮಾಮಾ ನಮ್ಮ ಹೆಸರುಗಳನ್ನು ಅದರಲ್ಲಿ ಹಾಕಿಲ್ಲವೆಂದು ನುಡಿಯುತ್ತಾರೆ. ಅದೇ ರೀತಿ ಕಾಟನ್ ಮಾರ್ಕೇಟ್ ಮತ್ತು ಇನ್ನೊಂದು ಆಸ್ತಿಯಲ್ಲಿಯೂ ಕೂಡಾ ಅವರ ಹೆಸರು ಇದೆ ಎಂದರೆ ಸಾಕ್ಷಿ ಅದರಲ್ಲಿ ಕೂಡಾ

ನಮ್ಮ ಹೆಸರನ್ನು ಸೇರಿಸಿಲ್ಲವೆಂದು ನುಡಿಯುತ್ತಾರೆ. ಸದರಿ ಹೆಸರುಗಳು ಬಂದಿದ್ದು 1992 ರಲ್ಲಿಯೆ ನಮಗೆ ಗೊತ್ತಿತ್ತು ಎಂದರೆ ಸಾಕ್ಷಿ ನಾನು ಆಗ ಚಿಕ್ಕವಳಿದ್ದೆ ಆದರೆ ನನ್ನ ಅಕ್ಕಳಿಗೆ ಗೊತ್ತಿತ್ತು ಎಂದು ನುಡಿಯುತ್ತಾರೆ. 1992 ರಲ್ಲಿ ನನಗೆ 9 ವರ್ಷ ವಯಸ್ಸಿತ್ತು ಎನ್ನುತ್ತಾರೆ. ನನ್ನ ತಾಯಿಯವರೆ ವರದಿ ಕೊಟ್ಟು ತಮ್ಮ ಹೆಸರು ಹಾಗೂ ಇಬ್ಬರ ಗಂಡುಮಕ್ಕಳ ಹೆಸರನ್ನು ಕೂಡ್ರಿಸಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಗೆ ಸದರಿ ಆಸ್ತಿಗಳನ್ನು ನನ್ನ ಇಬ್ಬರು ಅಣ್ಣತಮ್ಮಂದಿರಿಗೆ ಕೊಡಬೇಕೆಂಬ ಇಚ್ಛೆ ಇದ್ದು ಆ ಕಾರಣಕ್ಕೆ ವಿಲ್ ಮಾಡಿದ್ದು ಆ ಪ್ರಕಾರ ಅವರ ಹೆಸರುಗಳನ್ನು ಕೂಡ್ರಿಸಿರುತ್ತಾರೆಂದರೆ ಸಾಕ್ಷಿ ಅವರು ವಿಲ್ ಮಾಡಿಯೆ ಇಲ್ಲ ಎನ್ನುತ್ತಾರೆ. ವಿಲ್ ಪ್ರಕಾರ ನನ್ನ ತಾಯಿಯವರನ್ನಾಗಲಿ ಮತ್ತು ನಮ್ಮನಾಗಲಿ ಅವರು ಚೆನ್ನಾಗಿ ನೋಡಿಕೊಂಡು ಬಂದಿದ್ದಾರೆಂದರೆ ಸಾಕ್ಷಿ ಮತ್ತೆ ವಿಲ್ ಮಾಡಿಲ್ಲ ಎನ್ನುತ್ತಾರೆ. ಮೃತ್ಯು ಪತ್ರದ ಪ್ರಕಾರ ನಮಗೆ ಯಾವುದೇ ಆಸ್ತಿ ಬರುವುದಿಲ್ಲವೆಂದು ಗೊತ್ತಿದ್ದು ಆದರು ನಾನು ವಿಲ್ ಮಾಡಿಲ್ಲವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮೃತ್ಯು ಪತ್ರದ ಪ್ರಕಾರ ನನ್ನ ಅಕ್ಕಳಿಗೂ ಕೂಡಾ ಯಾವುದೆ ಆಸ್ತಿ ಬರುವುದಿಲ್ಲವೆಂದು ಗೊತ್ತಿದೆ ಅದಕ್ಕೆ ಅವರು ನನಗೆ ಸಪ್ರೋರ್ಟ ಮಾಡುತ್ತಿಲ್ಲವೆಂದರೆ ಸಾಕ್ಷಿ ಮತ್ತೆ ವಿಲ್ ಮಾಡಿಲ್ಲ ಎನ್ನುತ್ತಾರೆ. ಸದರಿ ದಾಖಲೆಯನ್ನು ಹಾಜರುಪಡಿಸಿದರೆ ನಿಮಗೆ ತೊಂದರೆ ಇಲ್ಲ ಎಂದರೆ ಸಾಕ್ಷಿ ತೊಂದರೆ ಇಲ್ಲ ಹಾಜರುಪಡಿಸಬಹುದು ಎನ್ನುತ್ತಾರೆ. ಸದರಿ ದಾವಾ ಆಸ್ತಿಯಲ್ಲಿ ನನಗಾಗಲಿ ನನ್ನ ಅಕ್ಕಳಿಗಾಗಲಿ ಯಾವುದೇ ಹಿಸ್ಸೆ ಇರುವುದಿಲ್ಲ ಆದರು ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಈ ದಾವಾ ತಂದಿರುತ್ತೇನೆ ಎಂದರೆ ಸರಿಯಲ್ಲ. ಕೋವಿಡ್ ಆದ ನಂತರ ನನ್ನ ಅಣ್ಣಂದಿರು ನನಗೆ ಹಣ ಕೇಳಿದ್ದು ಕೊಡದೆ ಅವರ ಮೇಲೆ ಸುಳ್ಳು ಕೇಸ ದಾಖಲಿಸಿದ್ದೇನೆಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿ ಮತ್ತು 1 ಮತ್ತು 12 ರ ವಕೀಲರನ್ನು ಕೂಗಿ ಕೆರೆಯಿಸಲಾಯಿತು, ಗೈರು ಹಾಜರಿರುವ ಕಾರಣ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಯಿತು.)

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ